ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).— ಮಾನ್ಯ ಅಧ್ಯಕ್ಷರೇ, ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹನಿರ್ದೇಶಕರು 'ಮೈಥಿಲಿ ವಿಶ್ವವಿದ್ಯಾಲಯ' ಎಂಬ ಬೀನಾಮಿ ವಿಶ್ವವಿದ್ಯಾನಿಲಯದ ಬಿ. ಎಡ್. ಡಿಗ್ರಿ ಪಡೆದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಡ್ತಿ ನೀಡಿದ ದೂರಿನ ಬಗ್ಗೆ ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಬೆಂಗಳೂರು ಅವರು ಕೂಲಂಕಷ ವಿಚಾರಣೆ ನಡೆಸಿರುತ್ತಾರೆ.

ವಿಚಾರಣೆಯಲ್ಲಿ ಕಂಡು ಬಂದಂತೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೂರು ಮಂದಿ ಪ್ರಾಥಮಿಕ ಶಾಲಾ ಶಿಕ್ಷಕರು (ಈ ಕೆಳಗೆ ಸೂಚಿಸಿದಂತೆ) ಮೈಥಿಲಿ ವಿಶ್ವವಿದ್ಯಾಲಯದ ಬಿ.ಎಡ್. ಡಿಗ್ರಿ ಪಡೆದಿರುವುದಾಗಿ ಪ್ರಮಾಣ ಪತ್ರ ಒಪ್ಪಿಸಿ ಬಡ್ತಿ ಪಡೆದಿರುತ್ತಾರೆ.

೧. ಶ್ರೀ ಗಣಪತಿ ಭಟ್ಟ

೨. ಶ್ರೀ ವಿಜಯ ವಿಠಲ,

೩. ಶ್ರೀ ಎಂ. ರಾಧಾಕೃಷ್ಣ ಭಟ್.

ಈ ಮೂರು ಮಂದಿ ಶಿಕ್ಷಕರನ್ನೂ ಹಿಂಬಡ್ತಿ ನೀಡಿ ಸಹನಿರ್ದೇಶಕರು ಆದೇಶ ಜಾರಿ ಮಾಡಿರುತ್ತಾರೆ. ಅಲ್ಲದೆ ಅವರಿಗೆ ಹೆಚ್ಚುವರಿಯಾಗಿ ಪಾವತಿಯಾದ ವೇತನವನ್ನು ಕಟಾವು ಮಾಡಲು ಆದೇಶಿಸಿರುತ್ತಾರೆ. ಆದರೆ ಈ ಶಿಕ್ಷಕರು ಹಿಂಬಡ್ತಿ ಆದೇಶದ ವಿರುದ್ಧ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾವೆ ಹೂಡಿದ್ದು, ನ್ಯಾಯ ಮಂಡಳಿಯು ಹಿಂಬಡ್ತಿ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತಾರೆ. ಮೇಲ್ಕಂಡ ಸಹಶಿಕ್ಷಕರುಗಳಿಗೆ ಮುಂಬಡ್ತಿಗೊಳಿಸುವ ಬಗ್ಗೆ ಇರುವ ಅರ್ಜಿಯ ಮೇಲೆ ತೀರ್ಪು ಬಂದ ನಂತರ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ರವೀಂದ್ರ ಕಲಾಕ್ಷೇತ್ರದಲ್ಲಿ ಯಕ್ಷಗಾನ ಪ್ರದರ್ಶನಕ್ಕೆ ಅವಕಾಶ

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಸಕಲ ಸಾಂಸ್ಕೃತಿಕ ಚಟುವಟಿಕೆಗಳ ಪ್ರದರ್ಶನಕ್ಕಾಗಿ ರೂಪಿಸಲ್ಪಟ್ಟ, ರಚಿಸಲ್ಪಟ್ಟ, ವಿನ್ಯಾಸಲಾಗಿರಿಸಲ್ಪಟ್ಟ ರಂಗಮಂದಿರ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ರಾಜ್ಯದ ಎಲ್ಲೆಡೆಯ ಸಾಂಸ್ಕೃತಿಕ ತಂಡಗಳಿಗೂ ಇಲ್ಲಿ ಪ್ರದರ್ಶನಕ್ಕೆ ಸಾಕಷ್ಟು ಅವಕಾಶ ಬೇಕು. ಆದರೆ, ಕಲಾಕ್ಷೇತ್ರ ಖಾಲಿ ಇದ್ದಾಗಲೂ ಸಹಾ ಯಕ್ಷಗಾನ ಪ್ರದರ್ಶನಕ್ಕೆ ಇತ್ತೀಚೆಗೆ ಅವಕಾಶ ನೀಡುವುದಿಲ್ಲವೆಂದು ತಿಳಿದು ಬಂದಿದೆ. ಕನ್ನಡ ನಾಡಿನ ಸುಂದರ ಸುರಮ್ಯ ಜಾನಪದ ಪ್ರಾಕಾರವಾದ ಯಕ್ಷಗಾನವನ್ನು ಅವಕಾಶ ಇದ್ದಾಗ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿಸಲು ಅನುವು ಮಾಡಿಕೊಡ ಬೇಕು ಎಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).— ಮಾನ್ಯ ಅಧ್ಯಕ್ಷರೇ, ಈಗಿರುವ ನಿಯಮಾವಳಿಗಳ ಪ್ರಕಾರ ರವೀಂದ್ರ ಕಲಾಕ್ಷೇತ್ರದಲ್ಲಿ ಕಲಾತಂಡಗಳಿಗೆ ಬೆಳಿಗ್ಗೆ ೬ ಘಂಟೆಯಿಂದ ಮಧ್ಯಾಹ್ನ ೨ ಘಂಟೆಯವರೆಗೆ ಮತ್ತು ಮಧ್ಯಾಹ್ನ ೨ ಘಂಟೆಯಿಂದ ರಾತ್ರಿ ೧೦ ಘಂಟೆಯವರೆಗೆ ಎರಡು ಪಾಳಿಗಳಲ್ಲಿ ಅವಕಾಶ ನೀಡಲಾಗುತ್ತಿದೆ. ಈ ಅವಧಿಯಲ್ಲಿ ರವೀಂದ್ರ ಕಲಾಕ್ಷೇತವು ಖಾಲಿ ಇದ್ದಲ್ಲಿ ಯಾವುದೇ ಕಲಾ ತಂಡಗಳಿಗೆ (ಯಕ್ಷಗಾನ ತಂಡಗಳಿಗೂ) ನಿಯಮಾವಳಿಗಳ ಪ್ರಕಾರ ಅವಕಾಶವಿದೆ.

ಸರ್ಕಾರದ ಆದೇಶದ ಪ್ರಕಾರ ರಾತ್ರಿ ೧೦ ಗಂಟೆಯ ನಂತರ ರವೀಂದ್ರ ಕಲಾಕ್ಷೇತ್ರವನ್ನು ಕಾಯ್ದಿರಿಸಲು ಅವಕಾಶವಿರುವುದಿಲ್ಲ. ಈ ನಿಬಂಧನೆಯಂತೆ, ಕಲಾಕ್ಷೇತ್ರದ ನಿರ್ವಹಣೆ ಹಾಗೂ ಸಿಬ್ಬಂದಿ ಅವಶ್ಯಕತೆ ಇರುವುದರಿಂದ ರಾತ್ರಿ ೧೦ ಗಂಟೆಯ ನಂತರ ನೀಡುವುದು ಸೂಕ್ತವಲ್ಲ. ಈ ಹಿನ್ನೆಲೆಯಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ಯಕ್ಷಗಾನ ಪ್ರದರ್ಶನಗಳಿಗೆ, ನಿಯಮಾವಳಿಗೊಳಪಟ್ಟು ಕಾಯ್ದಿರಿಸಲು ಅವಕಾಶವಿದೆ.

ವಿಧಾನಸೌಧ, ಹೈಕೋರ್ಟ್ ಮತ್ತು ಶಾಸಕರ ಭವನಕ್ಕೆ ಬರುವ ಸಾರ್ವಜನಿಕರಿಗೆ ಸುಲಭ ಶೌಚಾಲಯದ ವ್ಯವಸ್ಥೆ

ಶ್ರೀ ಪರಿಕಲ್ ಎಂ. ಮಲ್ಲಪ್ಪ.— ಮಾನ್ಯ ಅಧ್ಯಕ್ಷರೇ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಈ ಕೆಳಕಂಡ ವಿಚಾರದ ಬಗ್ಗೆ ಸೆಳೆಯಲು ಇಷ್ಟಪಡುತ್ತೇನೆ. ವಿಧಾನಸೌಧ, ಹೈಕೋರ್ಟು, ಶಾಸಕರ ಭವನ ಇವುಗಳಿಗೆ ಪ್ರತಿದಿನ ಸಾವಿರಾರು ಜನ ಪ್ರವಾಸಿಗರು ಹಾಗೂ ಸಾಮಾನ್ಯ ಸಾರ್ವಜನಿಕರು ಭೇಟಿ ನೀಡುತ್ತಾರೆ. ಆದರೆ ಈ ಮೂರು ಬೃಹತ್ ಕಟ್ಟಡಗಳ ಹೊರಭಾಗದಲ್ಲಿ

ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸಾರ್ವಜನಿಕ ಸುಲಭ ಶೌಚಾಲಯಗಳ ವ್ಯವಸ್ಥೆ ಇಲ್ಲ. ಆದುದರಿಂದ ಪ್ರವಾಸಿಗರು ಹಾಗೂ ಸಾರ್ವಜನಿಕರು ಸದರಿ ಕಟ್ಟಡಗಳ ಮುಂದಿರುವ ಪಾರ್ಕಿಂಗ್‌ಗಳಲ್ಲಿ ಇರುವ ಖಾಲಿ ಜಾಗಗಳಲ್ಲಿ ಮಲಮೂತ್ರ ವಿಸರ್ಜನೆ ಮಾಡುವುದರಿಂದ ಸದರಿ ಕಟ್ಟಡಗಳ ಸುತ್ತಲಿನ ಪರಿಸರ ಹೊಲಸಾಗಿದೆ. ಹಾಗೂ ಉದ್ಯಾನವನಗಳೂ ಹೊಲಸಾಗುತ್ತಿದೆ. ಆದಕಾರಣ ಹೈಕೋರ್ಟ್ ಬಳಿ, ಶಾಸಕರ ಭವನದ ಬಳಿ ಹಾಗೂ ವಿಧಾನಸೌಧದ ಬಳಿ, ಆಧುನಿಕ ವ್ಯವಸ್ಥೆಯುಳ್ಳ, ಸಾಕಷ್ಟು ನೀರಿನ ವ್ಯವಸ್ಥೆಯುಳ್ಳ ಸುಲಭ ಶೌಚಾಲಯಗಳನ್ನು ಕೂಡಲೇ ನಿರ್ಮಿಸಿ ಸಾರ್ವಜನಿಕರಿಗೆ ಹಾಗೂ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಬೇಕು. ಅದರಲ್ಲೂ ಹೆಣ್ಣುಮಕ್ಕಳು ಹಾಗೂ ಸ್ತ್ರೀಯರಿಗೆ ಸಾರ್ವಜನಿಕ ಶೌಚಾಲಯವಿಲ್ಲದೆ ಬಹಳ ತೊಂದರೆಯಾಗುತ್ತಿದೆ. ಕೂಡಲೇ ಈ ಬಗ್ಗೆ ಕ್ರಮ ಕೈಗೊಂಡು ಪರಿಸರವನ್ನು ಸ್ವಚ್ಛವಾಗಿಡುವುದಲ್ಲದೆ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರುತ್ತೇನೆ. ಮಾನ್ಯ ಅಧ್ಯಕ್ಷರೇ, ಇದು ತಮಗೂ ಬರುತ್ತದೆ. ಏಕೆಂದರೆ ವಿಧಾನಸೌಧ ಮತ್ತು ಶಾಸಕರ ಭವನ ಈ ಭಾಗದಲ್ಲಿಯೇ ಬರುತ್ತದೆ.

ಅಧ್ಯಕ್ಷರು :—ಹೌದು ವಿಧಾನಸೌಧದಲ್ಲಿ ನನ್ನದೂ ಸ್ವಲ್ಪ ಅಧಿಕಾರ ಇದೆ. I would like the government to take serious note of the suggestion which he has made.

ಶ್ರೀ ಟಿ. ಎನ್. ನರಸಿಂಹಮೂರ್ತಿ :—ಮಾನ್ಯ ಅಧ್ಯಕ್ಷರೇ, ಪ್ರಥಮ ಬಾರಿಗೆ ಮಾನ್ಯ ಪೆರಿಕಲ್ ಎಂ. ಮಲ್ಲಪ್ಪನವರು ವಿದೇಶೀ ಪ್ರವಾಸಿಗರು ಮತ್ತು ನಮ್ಮ ರಾಜ್ಯದ ಇತರ ಕಡೆಗಳಿಂದ ವಿಧಾನಸೌಧ ನೋಡಲಿಕ್ಕೆ ಬರತಕ್ಕಂತಹವರಿಗೆ ಶೌಚಾಲಯಗಳನ್ನು ನೀಡುವ ಮೂಲಕ ಕನಿಷ್ಠ ಸೌಲಭ್ಯಗಳನ್ನು ನೀಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ, ಮತ್ತು ಅವರ ವಾದಕ್ಕೆ ತಾವೂ ಕೂಡ ಧ್ವನಿಗೂಡಿಸಿದ್ದೀರಿ. ಇದು ಬಹಳ ಉತ್ತಮವಾದ ಸಲಹೆಯಾಗಿದೆ. ಸರ್ಕಾರ ಇದನ್ನು ಎಚ್ಚರಿಕೆಯಿಂದ ಗಮನಿಸಿ, ನಾಗರೀಕರಿಗೆ ಮತ್ತು ಪ್ರವಾಸಿಗರಿಗೆ ಯಾವ ರೀತಿಯ ಸೌಲಭ್ಯ ಕೊಡಬೇಕೆಂಬ ಬಗ್ಗೆ ಚಿಂತನೆ ಮಾಡುತ್ತದೆ.

ಅಧ್ಯಕ್ಷರು.—ಈ ಉತ್ತರವನ್ನು ಯಾರು ಬೇಕಾದರೂ ಹೇಳಬಹುದು ಅಲ್ಲವೇ ? ಇತ್ತೀಚೆಗೆ ಚಿಂತನ ಚಿಲುಮೆಗಳು ಜಾಸ್ತಿ ಆಗಿ.....

ಶ್ರೀ ಸಿ. ಬೈರೇಗೌಡ ;—ಇವರು ಚಿಂತನೆ ಮಾಡುವವರೆಗೂ ಬಂದವರು ಎಲ್ಲಿಗೆ ಹೋಗಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ :—ಪತಕ್ಕಾಗಿ ಚಿಂತನೆ ಎಂಬ ಪದವನ್ನು ಹೇಳಿದೆ ಎಂದರೆ ಯಾವಾಗಲೂ ಪರಿಶೀಲಿಸುತ್ತೇನೆ ಪರಿಶೀಲಿಸುತ್ತೇನೆಂದು ಹೇಳುತ್ತಿದ್ದೆ ಪದ ಬದಲಾವಣೆಯಾಗಲಿ ಎಂದು ಆ ರೀತಿ ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ :—ಚಿಂತನೆ, ಪರಿಶೀಲನೆ, ಕಾಲಾವಕಾಶ, ಈ ಸರಕಾರದ ಒಂದು ಮೂಲಭೂತ ಹಕ್ಕು ಆದಂತೆ ಆಯಿತು.

(ಗೊಂದಲ)

ಶ್ರೀ ಟಿ. ಎನ್. ನರಸಿಂಹಮೂರ್ತಿ:—ನಾನು ಅಷ್ಟು ಲಘುವಾಗಿ ಹೇಳಲಿಲ್ಲ. ಅವರು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಸರಕಾರ ಅದನ್ನು ಪರಿಶೀಲಿಸುತ್ತದೆ.

ಗಮನ ಸೆಳೆಯುವ ಸೂಚನೆ

(1) ರಾಷ್ಟ್ರೀಕೃತ ಬ್ಯಾಂಕುಗಳವರು ಬೆಂಗಳೂರು ನೀರು ಸರಬರಾಜು ಮಂಡಳಿಯಂವರ ನೀರಿನ ಬಿಲ್ಲನ್ನು ತೆಗೆದುಕೊಳ್ಳದೇ ಇರುವುದರಿಂದ ಉಂಟಾಗಿರುವ ತೊಂದರೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಬೆಂಗಳೂರು ನಗರದಲ್ಲಿರುವ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರ ನೀರಿನ ಬಿಲ್ಲು ತೆಗೆದುಕೊಳ್ಳುವುದನ್ನು ನಿಲ್ಲಿಸಿರುವುದರಿಂದ ಉಂಟಾಗಿರುವ ತೊಂದರೆ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ (ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಮಂತ್ರಿಮಂಡಲದ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.